# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | 1085 |
| ಸದಸ್ಯರ ಹೆಸರು | ಶ್ರೀ ಅ. ದೇವೇಗೌಡ<br>(ಪದವೀಧರರ ಕ್ಷೇತ್ರದಿಂದ) |
| ಉತ್ತರಿಸುವ ದಿನಾಂಕ | 23-02-2024 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ರೈತ ಕೇಂದ್ರಗಳು ಸ್ಥಾಪನೆ ಆಗಿರುವ ಒಟ್ಟು ಸಂಖ್ಯೆ ಎಷ್ಟು; ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಒಟ್ಟು ಕೇಂದ್ರಗಳ ಸಂಖ್ಯೆ ಎಷ್ಟು: (ಜಿಲ್ಲಾವಾರು ಮಾಹಿತಿ ಒದಗಿಸುವುದು) | ಸರ್ಕಾರಿ ಆದೇಶ ಸಂಖ್ಯೆ: ಕೃತೋಇ 239 ಕೃಯೋಕಾ 99 ದಿ:29.06.2000 ರಂತೆ 747 ರೈತ ಸಂಪರ್ಕ ಕೇಂದ್ರಗಳನ್ನು ರಾಜ್ಯದಲ್ಲಿ ಸ್ಥಾಪನೆ ಮಾಡಲಾಗಿರುತ್ತದೆ.<br><br>ಪ್ರಸ್ತುತ ರಾಜ್ಯದಲ್ಲಿ ಒಟ್ಟು 742 ರೈತ ಸಂಪರ್ಕ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.( ಜಿಲ್ಲಾವಾರು ವಿವರ ಅನುಬಂಧದಲ್ಲಿ ಒದಗಿಸಲಾಗಿದೆ) |
| ಆ | ರೈತ ಕೇಂದ್ರದಿಂದ ರೈತರಿಗೆ ನೀಡಲಾಗುವ ಸವಲತ್ತುಗಳೇನು: (ವಿವರ ಒದಗಿಸುವುದು) | ಕೃಷಿ ಇಲಾಖೆಯಲ್ಲಿ ದೊರೆಯುವ ಸೌಲಭ್ಯ/ಸೇವೆಗಳ ಬಗ್ಗೆ ಮಾಹಿತಿ ನೀಡಲು ಹೋಬಳಿ ಮಟ್ಟದಲ್ಲಿ ಕೃಷಿ ಅಧಿಕಾರಿ, ಸಹಾಯಕ ಕೃಷಿ ಅಧಿಕಾರಿ ಮತ್ತು ಆತ್ಮ ಸಿಬ್ಬಂದಿಗಳು ರೈತ ಸಂಪರ್ಕ ಕೇಂದ್ರಗಳಲ್ಲಿ ಹಾಜರಿದ್ದು ರೈತರಿಗೆ ಮಾಹಿತಿ ನೀಡುತ್ತಾರೆ. ರೈತರ ತರಬೇತಿ, ಗ್ರಾಮ ಸಭೆ ಇತರೆ ಕಾರ್ಯಕ್ರಮಗಳಲ್ಲಿ ಇಲಾಖೆಯಲ್ಲಿ ಲಭ್ಯವಿರುವ ಯೋಜನೆಗಳ ಬಗ್ಗೆ ತಿಳಿಸಲಾಗುತ್ತಿದೆ. ರೈತರಲ್ಲಿ ಜಾಗೃತಿ ಮೂಡಿಸಲು ಹಾಗೂ ಸೌಲಭ್ಯಗಳನ್ನು ನಿಯಮಿತವಾಗಿ ರೈತರಿಗೆ ತಲುಪಿಸುವ ನಿಟ್ಟಿನಲ್ಲಿ ಇಲಾಖಾ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಾರೆ ಹಾಗೂ ಈ ಕೆಳಕಂಡಂತೆ ಕ್ರಮ ವಹಿಸಲಾಗುತ್ತಿದೆ.<br><br>1. ಬೆಳೆ ಆಯ್ಕೆ, ಬೆಳೆ ಉತ್ಪಾದನಾ ಕಾರ್ಯಕ್ರಮಗಳು, ಮಾರುಕಟ್ಟೆ ಮಾಹಿತಿ ಮುಂತಾದ ವಿಷಯಗಳ ಬಗ್ಗೆ ರೈತರಿಗೆ ತಾಂತ್ರಿಕ ಮಾಹಿತಿ ನೀಡಲಾಗುತ್ತದೆ.<br>2. ಕೃಷಿ ಪರಿಕರಗಳಾದ ಬಿತ್ತನೆಬೀಜ, ರಸಗೊಬ್ಬರ, ಸಸ್ಯ ಸಂರಕ್ಷಣಾ ಔಷಧಿ ಮುಂತಾದವುಗಳನ್ನು ಸ್ಥಳೀಯವಾಗಿ ಒದಗಿಸಲು ಸಂಯೋಜನೆ ಮಾಡಲಾಗುತ್ತದೆ.<br>3. ಬೀಜ ಮೊಳಕೆ ಮತ್ತು ಗುಣಮಟ್ಟ ಪರೀಕ್ಷೆ, ಮಣ್ಣು ಪರೀಕ್ಷೆ ಇತ್ಯಾದಿ ಮೂಲ ಪರೀಕ್ಷಾ ಸೌಲಭ್ಯಗಳನ್ನು ಸ್ಥಳೀಯವಾಗಿ ಒದಗಿಸಲಾಗುತ್ತದೆ. |

| | | |
|---|---|---|
| | | 4. ಸಾರ್ವಜನಿಕ ಮತ್ತು ಖಾಸಗಿ ಕ್ಷೇತ್ರಗಳ ಬಿತ್ತನೆ ಮತ್ತು ಇತರೆ ಪರಿಕರಗಳನ್ನು ಬೆಳೆ ಪ್ರಾತ್ಯಕ್ಷಿಕೆಗಾಗಿ ಒದಗಿಸುವುದು.<br>5. ಸಾರ್ವಜನಿಕ ಮತ್ತು ಖಾಸಗಿ ಕ್ಷೇತ್ರಗಳ ತಂತ್ರಜ್ಞಾನ ಮತ್ತು ಪರಿಕರಗಳ ತುಲನೆ/ಪರಿಶೀಲನೆಗೆ ಅವಕಾಶ ಒದಗಿಸುವುದು.<br>6. ನಿಯಮಿತವಾಗಿ ಗುಂಪುವಾರು ಭೇಟಿ ಕಾರ್ಯಕ್ರಮದ ಅನ್ವಯ ಕ್ಷೇತ್ರ ಭೇಟಿ, ವಿಸ್ತರಣಾ ಕಾರ್ಯ ಹಾಗೂ ಇಲಾಖೆಯ ವಿವಿಧ ಯೋಜನೆಗಳನ್ನು /ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತದೆ. ಪೋಸ್ಟರ್, ಕರಪತ್ರಗಳ ಮುಖಾಂತರ, ಗ್ರಾಮಸಭೆಗಳು ಮತ್ತು ತರಬೇತಿಗಳಲ್ಲಿ ಜನಪ್ರತಿನಿಧಿಗಳಿಗೆ ಹಾಗೂ ರೈತರಿಗೆ ಇಲಾಖಾ ಯೋಜನೆಗಳ ಬಗ್ಗೆ ಮಾಹಿತಿ ನೀಡುವ ನಿಟ್ಟಿನಲ್ಲಿ ರೈತ ಸಂಪರ್ಕ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. |
| ಇ | ರೈತ ಕೇಂದ್ರಗಳಿಂದ ರೈತರಿಗೆ ಕೃಷಿ ಚಟುವಟಿಕೆ ಅವಧಿಯಲ್ಲಿ ಉತ್ತಮ ಬಿತ್ತನೆ ಬೀಜ ಮತ್ತುಪ ರಾಸಾಯನಿಕ ಹಾಗೂ ರಸಗೊಬ್ಬರ ಕೊರತೆ ರಾಜ್ಯದ ಕೆಲವು ಭಾಗಗಳಲ್ಲಿ ಇರುವ/ಇಲ್ಲದಿರುವ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು? | ರಾಜ್ಯದಲ್ಲಿ 2023-24 ನೇ ಸಾಲಿನಲ್ಲಿ ಕೃಷಿ ಇಲಾಖೆಯ ವತಿಯಿಂದ ರೈತರಿಗೆ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ವಿತರಣೆಗಾಗಿ ಅನುಷ್ಠಾನಗೊಳಿಸಲಾಗುವ ರಾಜ್ಯ ಸರ್ಕಾರದ "ಬೀಜಗಳ ಪೂರೈಕೆ " ಯೋಜನೆಯಡಿ ಭತ್ತ, ಹೈ.ಭತ್ತ, ರಾಗಿ, ಜೋಳ, ಮೆಕ್ಕೆಜೋಳ, ಗೋಧಿ, ಸಜ್ಜೆ, ನವಣೆ, ಹೆಸರು, ಉದ್ದು, ಅಲಸಂದೆ, ಕಡಲೆ, ತೊಗರಿ ನೆಲಗಡಲೆ, ಸೂರ್ಯಕಾಂತಿ, ಕುಸುಬೆ ಮತ್ತು ಸೋಯಾಅವರೆ, ಬೆಳೆಗಳ ಬಿತ್ತನೆ ಬೀಜಗಳನ್ನು ಪೂರೈಸಲಾಗುತ್ತಿದೆ. ರಾಜ್ಯದ ಎಲ್ಲಾ ವರ್ಗದ ರೈತರಿಗೆ (ಸಾಮಾನ್ಯ ರೈತರಿಗೆ ಶೇ 50ರವರೆಗೆ ಹಾಗು ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಪಂಗಡದವರಿಗೆ ಶೇ.75 ರವರೆಗೆ) ಒಟ್ಟಾರೆ ಗರಿಷ್ಟ 2.00 ಹೆಕ್ಟೇರ್ ಅಥವಾ ಅವರ ವಾಸ್ತವಿಕ ಹಿಡುವಳಿ ಯಾವುದು ಕಡಿಮೆಯೋ ಆ ವಿಸ್ತೀರ್ಣದ ಮಿತಿಯೊಳಗೆ ರೈತ ಸಂಪರ್ಕ ಕೇಂದ್ರಗಳು, ಗುರುತಿಸಿದ ಹೆಚ್ಚುವರಿ ಮಾರಾಟ ಕೇಂದ್ರಗಳ ಹಾಗೂ ಆಯ್ದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮುಖಾಂತರ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜಗಳನ್ನು ಪೂರೈಸಲಾಗಿದೆ.<br><br>ಪ್ರಸ್ತುತ ಸಾಲಿನಲ್ಲಿ ಕೃಷಿ ಇಲಾಖೆಯಿಂದ ಮುಂಗಾರು ಹಂಗಾಮಿನಲ್ಲಿ3.52 ಲಕ್ಷ ಕ್ವಿಂಟಾಲ್ ಮತ್ತು ಹಿಂಗಾರು/ಬೇಸಿಗೆ ಹಂಗಾಮಿನಲ್ಲಿ 2.60 ಲಕ್ಷಕ್ವಿಂಟಾಲ್ ಬಿತ್ತನೆ ಬೀಜಗಳನ್ನು ಒಟ್ಟಾರೆ 13.08 ಲಕ್ಷ ರೈತರಿಗೆ ಯಾವುದೇ ಕೊರತೆ ಇಲ್ಲದೆ ರಿಯಾಯಿತಿ ಯೋಜನೆಗಳಡಿ ವಿತರಿಸಲಾಗಿರುತ್ತದೆ.ಬಿತ್ತನೆ ಬೀಜಗಳ ಕೊರತೆಯಾಗಿರುವ ಬಗ್ಗೆ ಇಲ್ಲಿಯವರೆಗೆ ಯಾವುದೇ ಪ್ರಕರಣಗಳು ವರದಿಯಾಗಿರುವುದಿಲ್ಲ. |

| | | |
|---|---|---|
| | | ರಾಜ್ಯದಲ್ಲಿ ರೈತ ಸಂಪರ್ಕ ಕೇಂದ್ರಗಳ ಮೂಲಕ ಅನುದಾನದ ಲಭ್ಯತೆಗೆ ಅನುಗುಣವಾಗಿ ರಾಜ್ಯ ವಲಯ ಸಸ್ಯ ಸಂರಕ್ಷಣೆ ಹಾಗೂ ಕೇಂದ್ರ ಪುರಸ್ಕೃತ ರಾಷ್ಟ್ರೀಯ ಆಹಾರ ಭದ್ರತಾ ಯೋಜನೆಯಡಿ ಪೀಡೆನಾಶಕಗಳನ್ನು ದಾಸ್ತಾನೀಕರಿಸಿ ಸಹಾಯಧನದಡಿ ರೈತರಿಗೆ ವಿತರಿಸಲಾಗುತ್ತಿದೆ. ಪೀಡೆನಾಶಕಗಳ ಕೊರತೆ ಕಂಡುಬಂದಿರುವುದಿಲ್ಲ.<br><br>ಕೇಂದ್ರ ಸರ್ಕಾರದ ಸಬ್ಸಿಡಿಗೆ ಒಳಪಡುವ ಡಿ.ಎ.ಪಿ, ಎಂ.ಒ.ಪಿ, ಎಸ್.ಎಸ್.ಪಿ, ಕಾಂಪ್ಲೆಕ್ಸ್ ಮತ್ತು ಯೂರಿಯಾ ರಸಗೊಬ್ಬರವನ್ನು ರಸಗೊಬ್ಬರ ಮಾರಾಟ ಪರವಾನಗಿ ಹೊಂದಿರುವ ಅಧಿಕೃತ ಮಾರಾಟಗಾರರ ಮೂಲಕ ರೈತರಿಗೆ ಮಾರಾಟ ಮಾಡಲಾಗಿರುತ್ತದೆ.<br><br>ರೈತ ಸಂಪರ್ಕ ಕೇಂದ್ರಗಳ ಮುಖಾಂತರ ಸಬ್ಸಿಡಿ ರಸಗೊಬ್ಬರಗಳನ್ನು ಮಾರಾಟ ಮಾಡುತ್ತಿಲ್ಲ.<br><br>ಪ್ರಸಕ್ತ ಸಾಲಿಗೆ 42.27 ಲಕ್ಷ ಮೆ.ಟನ್ ವಿವಿಧ ಗ್ರೇಡ್‌ನ ರಸಗೊಬ್ಬರಗಳ ಬೇಡಿಕೆಗೆ, 49.18 ಲಕ್ಷ ಮೆ.ಟನ್ (ಆರಂಭಿಕ ಶಿಲ್ಕು ಒಳಗೊಂಡಂತೆ) ಸರಬರಾಜಾಗಿದ್ದು, 37.80 ಲಕ್ಷ ಮೆ.ಟನ್ ಮಾರಾಟವಾಗಿ, 11.37 ಲಕ್ಷ ಮೆ.ಟನ್ ದಾಸ್ತಾನಿರುತ್ತದೆ. ರಸಗೊಬ್ಬರ ಪೂರೈಕೆ ಪ್ರಕ್ರಿಯೆ ಜಾರಿಯಲ್ಲಿದ್ದು ಯಾವುದೇ ಕೊರತೆ ಇರುವುದಿಲ್ಲ.<br><br>ಮುಂದುವರೆದು, ರಸಗೊಬ್ಬರಗಳ ಸಮತೋಲನಾತ್ಮಕ ಬಳಕೆಯನ್ನು ಉತ್ತೇಜಿಸಲು ಆಹಾರ ಪೌಷ್ಠಿಕ ಭದ್ರತೆ ಯೋಜನೆಯಡಿ ರೈತ ಸಂಪರ್ಕ ಕೇಂದ್ರಗಳ ಮೂಲಕ ಲಘುಪೋಷಕಾಂಶಗಳಾದ ಜಿಂಕ್ ಸಲ್ಫೇಟ್, ಬೋರಾಕ್ಸ್, ಫೆರಸ್ ಸಲ್ಫೇಟ್, ಮೆಗ್ನೀಷಿಯಂ ಸಲ್ಫೇಟ್ ಹಾಗೂ ಕರ್ನಾಟಕ ರಾಜ್ಯ ಅಧಿಸೂಚಿತ ಲಘುಪೋಷಕಾಂಶ ಮಿಶ್ರಣಗಳು, ಜೈವಿಕ ಮತ್ತು ಸಾವಯವ ಗೊಬ್ಬರಗಳನ್ನು ರಿಯಾಯಿತಿ ದರದಲ್ಲಿ ರೈತರಿಗೆ ವಿತರಿಸಲಾಗಿರುತ್ತದೆ. |

ಸಂಖ್ಯೆ: AGRI/35/ACT/2023

**(ಎನ್. ಚಲುವರಾಯಸ್ವಾಮಿ)**
ಕೃಷಿ ಸಚಿವರು

| ಅನುಬಂಧ- LCQ-1085 | | |
|---|---|---|
| **ಜಿಲ್ಲಾವಾರು ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ರೈತ ಸಂಪರ್ಕ ಕೇಂದ್ರಗಳ ವಿವರ** | | |
| **ಕ್ರ.ಸಂ** | **ಜಿಲ್ಲೆ** | **ರೈತ ಸಂಪರ್ಕ ಕೇಂದ್ರಗಳ ಸಂಖ್ಯೆ** |
| 1 | ಬಾಗಲಕೋಟೆ | 18 |
| 2 | ಬೆಂಗಳೂರು (ಗ್ರಾ) | 17 |
| 3 | ಬೆಂಗಳೂರು (ನ) | 11 |
| 4 | ಬೆಳಗಾವಿ | 35 |
| 5 | ಬಳ್ಳಾರಿ | 13 |
| 6 | ಬೀದರ್ | 30 |
| 7 | ಚಾಮರಾಜನಗರ | 16 |
| 8 | ಚಿಕ್ಕಬಳ್ಳಾಪುರ | 26 |
| 9 | ಚಿಕ್ಕಮಗಳೂರು | 34 |
| 10 | ಚಿತ್ರದುರ್ಗ | 22 |
| 11 | ದಕ್ಷಿಣ ಕನ್ನಡ | 16 |
| 12 | ದಾವಣಗೆರೆ | 20 |
| 13 | ಧಾರವಾಡ | 14 |
| 14 | ಗದಗ | 11 |
| 15 | ಕಲಬುರ್ಗಿ | 32 |
| 16 | ಹಾಸನ | 38 |
| 17 | ಹಾವೇರಿ | 19 |
| 18 | ಕೊಡಗು | 16 |
| 19 | ಕೋಲಾರ | 27 |
| 20 | ಕೊಪ್ಪಳ | 20 |
| 21 | ಮಂಡ್ಯ | 31 |
| 22 | ಮೈಸೂರು | 33 |
| 23 | ರಾಯಚೂರು | 37 |
| 24 | ರಾಮನಗರ | 18 |
| 25 | ಶಿವಮೊಗ್ಗ | 40 |
| 26 | ತುಮಕೂರು | 50 |
| 27 | ಉಡುಪಿ | 9 |
| 28 | ಉತ್ತರ ಕನ್ನಡ | 35 |
| 29 | ವಿಜಯಪುರ | 20 |
| 30 | ವಿಜಯನಗರ | 18 |
| 31 | ಯಾದಗಿರಿ | 16 |
| **ಒಟ್ಟು** | | **742** |